ಆ) 1,67,640-33 ರೂಪಾಯಿಗಳು, ಖರ್ಚು ಕಳೆದು ಉಳಿದ 1,12,308 ರೂಪಾಯಿಗಳನ್ನು ಸಿಂಡಿಕೇಟ್ ಬ್ಯಾಂಕ್, ಕಾಪು ಅಕೌಂಟ್ಸ್ ನಂಬರು 18900ನಲ್ಲಿ ಠೇವಣಿ ಇಡಲಾಗಿದೆ.

ಆ) 17,91,283-64 ರೂಪಾಯಿಗಳು.

1) ಸಿಂಡಿಕೇಟ್ ಬ್ಯಾಂಕ್ ಕಾಪು
2) ವಿಜಯ ಬ್ಯಾಂಕ್ ಕಾಪು

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ ನಂತರ ಮೂರು ತಿಂಗಳಲ್ಲಿ 1,67,640-00 ರೂ.ಗಳು ಸಂಗ್ರಹವಾಗಿ ಖರ್ಚಿಲ್ಲ ಕಳೆದು ಉಳಿದದ್ದು 1,12,308 ರೂ. ಆದೇ ರೀತಿಯಲ್ಲಿ 10 ವರ್ಷಗಳ ಕಾಲ ಆಡಳಿತ ಮಂಡಲಿ ಇದ್ದಾಗ 17,91,283-64 ರೂ.ಗಳಿತ್ತು. ಆದರೆ ಅದರಲ್ಲಿ ಖರ್ಚಾದದ್ದೆಷ್ಟು ? ಉಳಿದದ್ದೆಷ್ಟು ? ಮತ್ತು ಸಿಂಡಿಕೇಟ್ ಬ್ಯಾಂಕಿನಲ್ಲಿ ಎಷ್ಟು, ವಿಜಯಾ ಬ್ಯಾಂಕಿನಲ್ಲಿ ಎಷ್ಟು ಇಡಲಾಯಿತು ಎಂಬುದನ್ನು ಮಂತ್ರಿಗಳು ಹೇಳಲಿಲ್ಲ. ಆಮೇಲೆ, ಮಂಗಳವಾರದ ಪೂಜೆ ಈಗ ನಡೆಯುತ್ತಿದೆ. ಅದರಿಂದ ಬರುವ ಆದಾಯ ಎಷ್ಟು ? ಇದನ್ನು ಯಾವ ಬ್ಯಾಂಕಿಗೆ ರೆಮಿಟ್ ಮಾಡುತ್ತಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ದಯವಿಟ್ಟು ಉತ್ತರ ನೋಡಲಿ. ಮಾನ್ಯ ಸದಸ್ಯರು ಹೋದ ಸದನದಲ್ಲಿ ಒಂದು ವಿಚಾರ ಹೇಳಿ ಅಲ್ಲಿನ ಅವ್ಯವಹಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದರು. ನಾನು ಅದರ ಬಗ್ಗೆ ಆಜ್ಞೆ ಹೊರಡಿಸಿ ತನಿಖೆ ಮಾಡಿಸುತ್ತಿದ್ದೇನೆ.

ಶ್ರೀ ವಸಂತ ವಿ. ಸಾಲಿಯಾನ್—ನನಗೆ ಸಂಪೂರ್ಣ ಉತ್ತರ ಸಿಗಲಿಲ್ಲ. ಈಗ 17,91,283-64 ಜಮಾ ಆಗಿದ್ದರೆ, ಖರ್ಚು ಎಷ್ಟಾಗಿತ್ತು ? ಯಾವ ಬ್ಯಾಂಕಿನಲ್ಲಿ ಠೇವಣಿ ಎಷ್ಟು ಇಡಲಾಗಿತ್ತು ಎಂಬುದನ್ನು ಹೇಳದೆ ತಪ್ಪಿಸಿಕೊಳ್ಳುತ್ತಿದ್ದಾರೆ. ಮಂತ್ರಿಗಳು ಇದರಲ್ಲಿ ಶಾಮೀಲಾಗಿದ್ದಾರೆಂದು ನನ್ನ ಅನುಮಾನ ಮತ್ತು ಮೊನ್ನೆ ಆಡಳಿತಾಧಿಕಾರಿ 17,000 ರೂ.ಗಳ ಪತ್ರಿಕಾ ಹೇಳಿಕೆ ನೀಡಿ ಖರ್ಚುಮಾಡಿದ್ದಾರೆ. ಇದನ್ನು ಅವರು ಹೇಗೆ ಮಾಡಿದರು ? ಇದಕ್ಕೆ ಮಂತ್ರಿಗಳ ಉತ್ತರ ಬರಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧಿಕಾರಿಗಳೇ ಆಗಲಿ, ಯಾವನೇ ಆಗಲಿ ನನ್ನ ದೃಷ್ಟಿಯಲ್ಲಿ ಹಾಗೆ ಕೊಡುವುದು ತಪ್ಪು. ದೇವಸ್ಥಾನದ ಆದಾಯದ ಹಣದಿಂದ ಈ ರೀತಿ ನಡೆಸಿದ್ದರೆ ವಿಚಾರಣೆ ಮಾಡಿಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ.—ನನಗೆ ಉತ್ತರ ಬರಲೇ ಇಲ್ಲ. 17,91,283-64 ರೂ.ಗಳಲ್ಲಿ ಸಿಂಡಿಕೇಟ್ ಮತ್ತು ವಿಜಯಾ ಬ್ಯಾಂಕ್‌ಗಳಲ್ಲಿ ಎಷ್ಟೆಷ್ಟು ಠೇವಣಿ ಇಡಲಾಗಿತ್ತು ?

ಶ್ರೀ ಎಸ್. ಆರ್. ಬೊಮ್ಮಾಯಿ.—ವಿವರ ನನಗೆ ಗೊತ್ತಿಲ್ಲ.

ಶ್ರೀ ಸಾಲಿಯಾನ.—ನನಗೆ ವಿವರ ಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಗಲಿ, ತರಿಸಿಕೊಡುತ್ತೇನೆ.

ವಿಷಯ ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖೋಟಾ ಅಧಿಕಾರ ಪತ್ರ

ಪ್ರ. ಸಂಖ್ಯೆ 82 (209) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖೋಟಾ ಅಧಿಕಾರ ಪತ್ರ (ಪವರ್ ಆಫ್ ಅಟಾರ್ನಿ) ಜಾಲದಿಂದಾಗಿ ಭೂ ಸುಧಾರಣಾ ಕಾಯ್ದೆಯ ಪ್ರಕಾರ ಜಮೀನಿನ ಪರಿಹಾರ ಹಣ ಪಡೆದುಕೊಳ್ಳುವವರಿಗೆ ವಂಚನೆಯಾಗಿದೆಯೆ ;

ಆ) ಹಾಗಿದ್ದಲ್ಲಿ ಅದರ ಸೂತ್ರದಾರರು ಯಾರು ;

ಇ) ಕಂದಾಯ ಇಲಾಖೆಯ ಸಿಬ್ಬಂದಿಯವರು ಅದರಲ್ಲಿ ಶಾಮೀಲಾಗಿದ್ದಾರೆಯೆ ;

ಈ) ಈ ಜಾಲದಿಂದ ಆದ ವಂಚನೆಯ ಹಣವೆಷ್ಟು :

ಉ) ತಪ್ಪಿತಸ್ಥರ ವಿರುದ್ಧ ದಾವೆ ದಾಖಲಾಗಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ಒಂದು ಪ್ರಕರಣವು ಬೆಳಕಿಗೆ ಬಂದಿದ್ದು, ಮಾಲೀಕರಾದ ಶ್ರೀಯುತ ಸೂರ್ಯ ನಾರಾಯಣ ಅಡಿಗರಿಗೆ ಭೂ ಪರಿಹಾರ ಮೊತ್ತವನ್ನು ಬನ್ನಾಡಿ ಪದ್ಮನಾಭ ಭಟ್ಟರು ಖೋಟಾ ಅಧಿಕಾರ ಪತ್ರದ ಮೂಲಕ ಪಡೆದಿರುತ್ತಾರೆ.

ಅ) ಶ್ರೀ ಬನ್ನಾಡಿ ಪದ್ಮನಾಭ ಭಟ್ಟ ಮತ್ತು ಕೆಲವು ಕಂದಾಯ ಅಧಿಕಾರಿಗಳು ಪೋರ್ಜರಿ ವ್ಯವಹಾರದಲ್ಲಿ ಮುಖ್ಯ ಕೈವಾಡ ಹೊಂದಿರುವರೆಂದು ಕಂಡುಬಂದಿರುತ್ತದೆ.

ಇ) ಭೂ ಸುಧಾರಣಾ ವಿಶೇಷ ತಹಸೀಲ್ದಾರ್ ಶ್ರೀ ಎ. ಪಿ. ಗೋವಿಂದಯ್ಯ ಮತ್ತು ಶಿರಸ್ತೆದಾರ್ ಶ್ರೀ ಪುರುಷೆಟ್ಟಿಗಾರ್ ಇವರು ಈ ಪ್ರಕರಣದಲ್ಲಿ ಶಾಮೀಲಾಗಿದ್ದಂತೆ ಕಂಡುಬಂದಿದ್ದು ಅವರಿಬ್ಬರನ್ನೂ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ. 39 ಎಡಿಇ 85 ದಿನಾಂಕ 25-4-85ರಲ್ಲಿ ಅಮಾನತ್ತಿನಲ್ಲಿರಿಸಲಾಗಿದೆ ಮತ್ತು ಇಲಾಖಾ ತನಿಖೆ ಪ್ರಾರಂಭವಾಗಿರುತ್ತದೆ.

ಈ) ಮೊಬಲಗು ರೂ. 42,487-00 ಈ ಪ್ರಕರಣದಲ್ಲಿ ಒಳಗೊಂಡಿರುತ್ತದೆ.

ಉ) ಉಡುಪಿ ಟೌನ್ ಪೋಲೀಸ್ ಸ್ಟೇಷನ್ನಿನಲ್ಲಿ ಬನ್ನಾಡಿ ಪದ್ಮನಾಭಭಟ್ಟ ಇವರ ವಿರುದ್ಧ ದೂರು ನೀಡಲಾಗಿ ಪೋಲಿಸ್ ವಿಚಾರಣೆ ನಡೆದು ಈಗ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ನನ್ನ ಗಮನಕ್ಕೆ ಪತ್ರಿಕೆಯ ಮೂಲಕ ಬಂತು. ಅಡಿಗರ ಹೆಸರಿನಲ್ಲಿ ಹಣವನ್ನು ಪೋರ್ಜರಿ ಮಾಡಿ ದೋಚಿದ್ದಾರೆಂದು ತಿಳಿದ ಕೂಡಲೇ ಸಂಬಂಧಿಸಿದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿಸಿ ಇನ್‌ವೆಸ್ಟಿಗೇಷನ್‌ಗೆ ಆರ್ಡರ್ ಹೊರಡಿಸಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.—ಇದರಲ್ಲಿ ಕೆಲವು ಅಧಿಕಾರಿಗಳು ಶಾಮೀಲಾಗಿದ್ದಾರಂತೆ. ಈಗ ಸಸ್ಪೆಂಡ್ ಆಗಿರುವವರನ್ನು ಹೊರತುಪಡಿಸಿ ಬೇರೆಯವರ ಮೇಲೂ ತನಿಖೆ ಮಾಡಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಬಳಿ ನಿಖರವಾದ ವಿವರಗಳಿದ್ದರೆ ಅಗತ್ಯವಾಗಿ ಮಾಡಿಸುತ್ತೇನೆ. ಈಗ ಸಸ್ಪೆಂಡ್ ಮಾಡಿರುವವರ ಮೇಲೆ ಆಗಲೇ ಚಾರ್ಜ್‌ಶೀಟ್ ಹಾಕಿಯಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಆ ಬನ್ನಾಡಿ ಪದ್ಮನಾಭ ಭಟ್ಟರನ್ನು ಏಕೆ ದಸ್ತಗಿರಿ ಮಾಡಲಿಲ್ಲ ? ಮಾಡಿದ್ದರೆ ವಿವರ ಸಿಗುತ್ತಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿವರಗಳನ್ನೆಲ್ಲಾ ಸಂಗ್ರಹಿಸಿಯೇ ಅವರ ಮೇಲೆ ಕೇಸ್ ಹಾಕಿರುವುದು.

ಶ್ರೀ ಬಿ. ಎಂ. ಇದಿನಬ್ಬ.—ಇದೇನೋ ಅಪ್ಪಿತಪ್ಪಿ ಸರ್ಕಾರದ ಗಮನಕ್ಕೆ ಬಂತು, ನೀವು ಕೇಸ್ ಹಾಕಿಸಿದಿರಿ. ಆದರೆ ಬೇರೆ ನ್ಯಾಯ ಮಂಡಲಿಗಳಲ್ಲಿ ಏನೇನಾಗಿದೆ ಎಂಬುದನ್ನೆಲ್ಲ ಹೇಗೆ ಪತ್ತೆಹಚ್ಚುವಿರಿ? ಪಾಪ, ಬಡವರನ್ನು ಮುಳುಗಿಸಿಬಿಡಬೇಡಿ. ಬಡಜನತೆ ಯಾರ ಬಳಿ ತಮ್ಮ ಅನ್ಯಾಯವನ್ನು ಹೇಳಿಕೊಳ್ಳಬೇಕು ? ಅವರನ್ನು ಕೇಳುವವರು ಯಾರು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕಾಗಿಯೇ ಕ್ರಾಸ್ಡ್ ಚೆಕ್ ಮೂಲಕ ಪೇಮೆಂಟ್ ಮಾಡಿಸುವ ವ್ಯವಸ್ಥೆ ಮಾಡಿದ್ದೇನೆ. ಬೇರೆಯವು ಇದ್ದರೆ ತನಿಖೆ ಮಾಡಿಸುತ್ತೇನೆ.

ವಿಷಯ ; ಸಹಕಾರಿ ಸಂಘಗಳ ಸಾಲ ವಸೂಲಾತಿಯ ಬಗ್ಗೆ.

ಪ್ರ. ಸಂಖ್ಯೆ 84 (218) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಮಳೆ ಇಲ್ಲದಿರುವ ಪ್ರದೇಶಗಳಲ್ಲೂ ಕೂಡ ಸಹಕಾರಿ ಸಂಘಗಳಿಂದ ಸಾಲ ವಸೂಲಿಗಾಗಿ ಜಪ್ತಿ ನಡೆಸುತ್ತಿರುವುದು ಆಕ್ಷೇಪಣೀಯವಾಗಿದ್ದು ತಾತ್ಕಾಲಿಕವಾಗಿ ವಸೂಲಿಯನ್ನು ತಡೆಯಲು ಆಜ್ಞೆಯನ್ನು ಹೊರಡಿಸಲಾಗುವುದೇ ;

ಆ) ಸೊಂಡೂರು ಕ್ಷೇತ್ರದ ತಾಳೂರು ಗ್ರಾಮದಲ್ಲಿ ಜಪ್ತಿ ನಡೆಸಿರುವುದನ್ನು ತಡೆಯಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗುವುದೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು),—

ಅ) ಬರಗಾಲ ಪೀಡಿತ ಪ್ರದೇಶಗಳಲ್ಲಿ ಅಣೇಲಾರಿ ಆರಾಣಿಗಿಂತ ಕಡಿಮೆ ಘೋಷಿಸಲ್ಪಟ್ಟಲ್ಲಿ ಚಾಲ್ತಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಬಹುದಾಗಿದೆ. ಸಹಕಾರಿ ಸಾಲಗಳ ವಸೂಲಾತಿಯಲ್ಲಿ ಉದ್ದೇಶ ಪೂರ್ವಕ ಸುಸ್ತಿದಾರರಲ್ಲದವರಿಗೆ, ವಿಶೇಷತಃ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಯಾವ ತೊಂದರೆಯೂ ಆಗದಂತೆ ಎಚ್ಚರಿಕೆ ವಹಿಸಲಾಗಿದೆ.

ಆ) ದೊರೆತಿರುವ ಮಾಹಿತಿಗನುಸಾರವಾಗಿ ಸೊಂಡೂರು ಕ್ಷೇತ್ರದ ತಾಳೂರು ಗ್ರಾಮದಲ್ಲಿ ಸಹಕಾರ ಸಂಘ ಸಾಲ ವಸೂಲಾತಿಗಾಗಿ ಯಾವ ಜಪ್ತಿ ಕ್ರಮ ತಗೆದುಕೊಂಡಿರುವುದಿಲ್ಲ.